**<u>ಸಾಕ್ಷಿಯನ್ನು ದಿನಾಂಕ 22-02-2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಜಿ.ಜೆ. ವಕೀಲರಿಂದಃ</u>**

ನನಗಿಗ ಅಂದಾಜು 66 ವರ್ಷ ವಯಸ್ಸಾಗಿರಬಹುದು. ವಾದಿಯ ತಂದೆ ಗುರುಲಿಂಗಪ್ಪನನ್ನು ನೋಡಿದ್ದೇನೆ. ಪ್ರತಿವಾದಿಯ ತಂದೆ ಸಿದ್ದಪ್ಪನನ್ನು ನೋಡಿಲ್ಲ. ಪ್ರತಿವಾದಿಯ ತಂದೆ ಸಿದ್ದಪ್ಪ ಎಂದು ನನಗೆ ಗೊತ್ತಿಲ್ಲ. ಗುರುಲಿಂಗಪ್ಪ ಮತ್ತು ಸಿದ್ದಪ್ಪನ ನಡುವೆ ಎನು ಸಂಬಂಧ ಇದೆ ಎನ್ನುವುದು ನನಗೆ ಗೊತ್ತಿಲ್ಲ.

ನನಗೆ 3 ಜನ ಸಹೋದರರಿದ್ದಾರೆ. ನನ್ನ ಹಿರಿಯ ಸಹೋದರನ ಹೆಸರು ರಾಯಪ್ಪ. ನಮ್ಮ ತಂದೆ ತೀರಿಕೊಂಡ ಬಳಿಕ ಅವರ ಜಮೀನು ಅವರ 4 ಜನ ಮಕ್ಕಳ ಹೆಸರಿಗೆ ಆಗಿದೆ.

ಗುರುಲಿಂಗಪ್ಪ ಈಗ ಬದುಕಿಲ್ಲ. ಗುರುಲಿಂಗಪ್ಪ ಬದುಕಿದ್ದಾಗ ದಾವಾ ಸ್ವತ್ತು ಆತನ ಹೆಸರಿಗೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಗುರುಲಿಂಗಪ್ಪ ಬದುಕಿದ್ದಾಗ ದಾವಾ ಸ್ವತ್ತು ಮತ್ತು ಇತರೇ ಆಸ್ತಿಗಳ ಪಾಲು ವಿಭಾಗ ಆಗಿದ್ದು ಸದರಿ ಪಾಲು ವಿಭಾಗದಲ್ಲಿ ದಾವಾ ಸ್ವತ್ತು ಪ್ರತಿವಾದಿ ಅಣ್ಣಾರಾವಗೆ ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ. ಗುರುಲಿಂಗಪ್ಪ ತೀರಿಕೊಂಡ ಬಳಿಕ ದಾವಾ ಸ್ವತ್ತಿನ ಖಾತೆ ವಾದಿ ಹೆಸರಿಗೆ ಆಗಿತ್ತು ಆದರೆ ಆನಂತರ ಪಾಲು ವಿಭಾಗದ ಪ್ರಕಾರ ಸದರಿ ಖಾತೆ ಪ್ರತಿವಾದಿಯ ಹೆಸರಿಗೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಫಲವತ್ತತೆ ಆಧಾರದ ಮೇಲೆ ಎಲ್ಲಾ ಆಸ್ತಿಗಳನ್ನು ಮೌಖಿಕವಾಗಿ ಹಂಚಿಕೊಂಡಿದ್ದಾರೆ ಎಂದು ನಿಮ್ಮ ಪ್ರಮಾಣ ಪತ್ರದಲ್ಲಿ ಬರೆಸಿರುವುದು ಸರಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಸರಿ ಇದೆ ಎನ್ನುತ್ತಾರೆ. ಪಾಲು ವಿಭಾಗದ ಪ್ರಕಾರ ವಾದಿ ಮತ್ತು ಪ್ರತಿವಾದಿಗಳ ಪಾಲಿಗೆ ಬಂದ ಆಸ್ತಿಗಳ ಖಾತೆ ಅವರುಗಳ ಪ್ರತ್ಯೇಕ ಹೆಸರಿಗೆ ಆಗಿದೆ ಎನ್ನುವುದು ಸರಿ.

ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**